**ಆತ್ಮ ಚೇತನನು ವೃದ್ಧಿಸನು ಕ್ಷೀಣಿಸನು**
**ಹುಟ್ಟು ಸಾವಿಲ್ಲದ ನಿತ್ಯಸತ್ಯನಿವನೆಂದು ತಿಳಿದವನು**
**ಹೇಗೆ ಆತ್ಮನನು ಸಂಹಾರ ಮಾಡಿಸುವ, ಇಲ್ಲ**
**ಸಂಹರಿಪನೆನ್ನುವನು ಪಾರ್ಥ? (೨–೨೧)**

ನೆನಪಿಡಲು ಕಷ್ಟವಲ್ಲವೆ? ಆದರೆ ಮನಸ್ಸನ್ನು ಮುದಗೊಳಿಸುವ ಪದ್ಯಗಳೂ ಹೆಚ್ಚು ಇವೆ. ಉದಾಹರಣೆಗೆ ಸ್ಥಿತಪ್ರಜ್ಞ ಲಕ್ಷಣ (೨–೫೫ ರಿಂದ ೫೮).

ಭಾವಾವಿಷ್ಟ ಗದ್ಯದ ಬಳಕೆಯ ಪರಿಣಾಮವಾಗಿ ಕೆಲವು ಕಡೆ ಅರ್ಥದ ಬಗ್ಗೆ ನಿಧಾನವಾಗಿ ಆಲೋಚಿಸುವಂತೆ ಆಗುತ್ತದೆ: **'ಗೀತೆಯ ಬಗ್ಗೆ ಓದೆ, ಬರೆಯೆ, ಅರಿಯೆ ಅಭ್ಯಾಸವಾಯ್ತು.'** ಇಲ್ಲಿ ಕ್ರಿಯೆ ನಿಷೇಧಾರ್ಥದಲ್ಲಿಲ್ಲ, ಓದಲು, ಬರೆಯಲು, ಅರಿಯಲು ಎಂದಿದರ ಅರ್ಥ ಎಂದು ನಿಧಾನವಾಗಿ ತಿಳಿಯುತ್ತದೆ. ಆದರೆ, **'ನನ್ನೇಕೆ ದೂಡುವೆಯು ನೀ ಮತ್ತೆ ಈ ಭಯಂಕರ ಯುದ್ಧಕಾಂಡಕೆ ಕೇಶವನೆ'**(೩–೧) ಇಲ್ಲಿ ದೂಡುವೆಯು ಅರ್ಥವಾಗದು. ವಿಸ್ತರಿಸಿದರೂ ಅರ್ಥವಾಗದ ಒಗಟಿನಂತಹ ಶ್ಲೋಕಗಳ ಅನುವಾದ ಮೂಲದ ಸಂದಿಗ್ಧತೆಯನ್ನು ಉಳಿಸಿಕೊಂಡಿದೆ.

**ಬೇರುಗಳ ಆಧಾರ ಮೇಲೆ ಟೊಂಗೆಗಳು**
**ಕೆಳಗಿರುವ ಅ–ಶ್ವ–ತ್ಥ ಮರದಂತೆ ಸಂಸಾರ**
**ಬುಡ ಪರಬ್ರಹ್ಮ ಕೆಳಮುಖದಿ ನೇತಾಡುವ**
**ದೇವ–ಜೀವರು ರೆಂಬೆ ಕೊಂಬೆಗಳು**
**ಅನುಕ್ಷಣವೂ ಅಂತರವ ಹೊಂದಿದರೂ ಅಳಿಯದಂತಿಹುದು**
**ಅರಳುತಿಹ ಅರಳಿಯಂತಿಹುದು**
**ವೇದವಾಕ್ಯಗಳು ಅದರೆಲೆಗಳಂತೆಂದರಿತವನು ವೇದ ಬಲ್ಲಿದನು**
(೧೫–೧)

ಇಂತಹ ಶ್ಲೋಕಗಳ ಅನುವಾದಕ್ಕೆ ಅಡಿ ಟಿಪ್ಪಣಿ ನೀಡಬೇಕಾದದ್ದು ಅಗತ್ಯ. ಅ–ಶ್ವ–ತ್ಥ ಎಂದು ಬಿಡಿಸಲು ಕಾರಣವೇನು ಎಂಬುದನ್ನು ತಿಳಿಸಬಹುದಿತ್ತು.

ಆರನೆಯ ಅಧ್ಯಾಯದಿಂದ ಅನುವಾದ ಉತ್ತಮಗೊಳ್ಳುತ್ತದೆ:

**ಅನ್ಯರನು ಬಿಟ್ಟು ನನ್ನನ್ನೆ ಧ್ಯಾನಿಸುತ ಭಕ್ತಿಯಿಂ ಸತತ**
**ಪೂಜಿಪರು ಹಲ ಜನರು ಆ ನಿಷ್ಠಭಕ್ತರ ಯೋಗಕ್ಷೇಮವನು**
**ಸಂಪೂರ್ಣ ವಹಿಸುವೆನು ನಾನು॥ (೯–೨೨)**

**ವಿಸ್ತಾರ ಆಗಸದಿ ಒಮ್ಮೆಲೆ ಸಾವಿರ ಸಾವಿರ ಸೂರ್ಯ–**
**ರುದಯಿಸಿದರೆ ಈ ವಿಶ್ವರೂಪನ ತೇಜ ಪ್ರಖರಕೆ**
**ಸಾಟಿಯಾದಾವು॥ (೧೧ –೧೨)**

**ರಹಸ್ಯದೊಳು ರಹಸ್ಯದ ಜ್ಞಾನವನು ನಿನಗೆ ಸಂಪೂರ್ಣವಾಗಿ**
**ಹೇಳಿದೆನು, ವಿಹಿತ ವಿಮರ್ಶೆಯ ಮಾಡಿ ನಿನ್ನ ಇಚ್ಛೆ**
**ಬಂದಂತೆ ಮಾಡುವುದೊಳಿತು ನೀನು॥ (೧೮–೬೩)**

ಇಂತಹ ಪದ್ಯಗಳು ಸಂತೋಷ ನೀಡುತ್ತವೆ. ತನ್ನಷ್ಟಕ್ಕೇ ನಿರಾಯಾಸವಾಗಿ ಅನೇಕ ಕಡೆ ಅನುವಾದ ಲಯ ಕಂಡುಕೊಳ್ಳುತ್ತದೆ.

**ಯಾವುದನು ಹೊಂದಿದರೆ ತಿರುಗಿಲ್ಲಿ ಬಾರರೋ ಅದು ನನ್ನ ಶ್ರೇಷ್ಠ ಸ್ಥಿತಿಯು...(೧೫–೬)**

**ನನ್ನ ಪೂಜಿಸುತ ಶರಣು ಬಂದರೆ ಮಾತ್ರ ದಾಟಬಲ್ಲರು ಈ ಮಾಯೆಯನ್ನು (೭–೧೪)**

**ನನ್ನಲ್ಲಿ ಗಮನವಿಡುವ ಸಾಧನೆಯ ಮಾಡು ನನ್ನಲ್ಲಿ ಬುದ್ಧಿಯನು ಸ್ಥಿರಗೊಳಿಸು ನೀನು (೧೨–೮)**

ಶ್ರೀ ರಾಯರ ಗೀತೆಯ ಮೇಲಿನ ಅಭಿಮಾನಕ್ಕೆ ಎಣೆ ಇಲ್ಲ. ಪುಸ್ತಕ ರಚನೆ ಮಾಡಿ ವಿರಮಿಸದೆ ಇದನ್ನು ಪ್ರಸಿದ್ಧ ಸಂಗೀತಗಾರರಾದ ಶ್ರೀ ನಾಗರಾಜರಾವ್ ಹವಾಲ್ದಾರ್ ಅವರಿಂದ ಸಾಹಿತ್ಯಕ್ಕೆ ಒತ್ತು ಕೊಟ್ಟು ಹಾಡಿಸಿ, ಸಿ.ಡಿ. ರೂಪದಲ್ಲಿ ಬಿಡುಗಡೆ ಮಾಡಿದ್ದಾರೆ. ಇಲ್ಲಿನ ಹಾಡುಗಾರಿಕೆ ಕೇಳಲು ಇಂಪಾಗಿದೆ; ಹೃದಯಂಗಮವಾಗಿದೆ. ಗದ್ಯಕ್ಕೂ ಇರುವ ಲಯವನ್ನು ಹಿಡಿದು ಶ್ರೀ ಹವಾಲ್ದಾರ್ ಉತ್ತಮವಾಗಿ ಸಂಗೀತ ಜೋಡಿಸಿದ್ದಾರೆ.

ನಾರಾಯಣಾಮೃತ ಫೌಂಡೇಷನ್‌ನವರು ಬೆಂಗಳೂರಿನ ಸುನಾದ ಆರ್ಟ್ ಫೌಂಡೇಷನ್ ಅವರ ಸಹಯೋಗದೊಡನೆ ತಂದ ಈ ಸಿ.ಡಿ. ಚೆನ್ನಾಗಿ ಬಂದಿದೆ. ಶ್ರೀಕೃಷ್ಣನಾಗಿ ಡಾ. ನಾಗರಾಜರಾವ್ ಹವಾಲ್ದಾರ್, ಅರ್ಜುನನಾಗಿ ಶ್ರೀ ಓಂಕಾರನಾಥ ಹವಾಲ್ದಾರ್, ಸಂಜಯನಾಗಿ ಶ್ರೀ ಕೌಶಿಕ್ ಐತಾಳ್ ಹಾಗೂ ಎಂ. ಜಿ. ರಮೇಶ ಎಲ್ಲರೂ ಭಾವಪೂರ್ಣವಾಗಿ ಹಾಡಿದ್ದಾರೆ. ಪ್ರತಿ ಪಾತ್ರಗಳಿಗೆ ಬೇರೆಬೇರೆ ಶೈಲಿಯ ಹಾಡುಗಾರಿಕೆ, ಧ್ವನಿ ನೀಡಿರುವುದು ನಾಟಕೀಯತೆಯನ್ನು ಒದಗಿಸಿ, ಕಣ್ಮುಂದೆ ಗೀತೋಪದೇಶ ನಡೆದ ಪರಿಣಾಮ ಬೀರುತ್ತದೆ.

ಪ್ರತಿ ಅಧ್ಯಾಯದ ಮೊದಲಲ್ಲಿ ಬರುವ ವಿಷಯ ವಿವರಣೆಯ ಸಾಲುಗಳು, ಸಿ.ಡಿ.ಯ ಹೊದಿಕೆಯ ಮೇಲೆ ಇರುವ ಶಾಂತಿಮಂತ್ರದಂತಹ ಸಮರ್ಪಣೆಯ ಸಾಲುಗಳು ಹೊಸದಾಗಿ ಬರೆದುವು. ಕೆಲವು ಕಡೆ ಲಯಕ್ಕಾಗಿ, ಅರ್ಥಸ್ಪಷ್ಟತೆಗಾಗಿ ಮೂಲದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಹಾಡಿರುವುದು ಸ್ವಾಗತಾರ್ಹ. ಉದಾಹರಣೆಗೆ– **'ತನ್ನ'** ಭೀಷ್ಮ ರಕ್ಷಿತ ಸೈನ್ಯವನು (೧–೧೦) **'ನಮ್ಮ'** ಆಗಿದೆ. **'ಬದ್ಧನಾಗನು ಕರ್ಮಬಂಧಕೆ'** (೪–೧೪) ಮಧ್ಯೆ **'ತಾನು'** ಸೇರಿದೆ. **'ಸಂನ್ಯಾಸಿಯೆನಿಸುವುದಿಲ್ಲವನು'** (೬–೧) **'ಸಂನ್ಯಾಸಿ ಆಗನು ಅವನು'** ಆಗಿದೆ. ಪುಸ್ತಕದ ಮುಂದಿನ ಮುದ್ರಣದಲ್ಲಿ ಈ ಬದಲಾವಣೆಗಳನ್ನು ಸೇರಿಸಬಹುದು.

ಬರಿಯ ಅನುವಾದಿತ ಪದ್ಯಗಳ ಸಂಗ್ರಹವನ್ನೂ ಅಲ್ಪ ಬೆಲೆಯಲ್ಲಿ ಪ್ರತ್ಯೇಕವಾಗಿ ಶ್ರೀ ಎನ್. ಆರ್. ರಾಯರು ಪ್ರಕಟಿಸಿದ್ದಾರೆ. ಸ್ಪರ್ಧೆಗೆ ಸಹಾಯಕವಾಗುವಂತೆ ಮುಖ್ಯ ಶ್ಲೋಕಗಳ ಅನುವಾದ ಸಂಗ್ರಹವನ್ನೂ ಪ್ರಕಟಿಸಬಹುದೇನೋ.

ರಾಯರು ತಮಗೆ ಸಂಬಂಧಿಸಿದ ಇತ್ತೀಚಿನ ಕೆಲವು ಅಹಿತಕರ ವಿದ್ಯಮಾನಗಳಿಂದ ವಿಚಲಿತರಾಗದೆ ಭಗವದ್ಗೀತೆಯ ಅಧ್ಯಯನದಿಂದಾಗಿ ಸಮಚಿತ್ತದಿಂದ ತಮ್ಮ ಕೆಲಸಗಳನ್ನು ದಕ್ಷತೆಯಿಂದ ಮಾಡುತ್ತಿರುವುದು ವಿಶೇಷ. ಶ್ರೀಕೃಷ್ಣ ಪರಮಾತ್ಮನು ಅವರಿಗೆ ಇಂತಹ ಅನೇಕ ಪುಸ್ತಕಗಳನ್ನು ರಚಿಸುವ ಅವಕಾಶವನ್ನು ನೀಡಲಿ.

**– ಡಾ. ಎಚ್. ಪಾಂಡುರಂಗ ವಿಠಲ, ಮೈಸೂರು**

⌘

# ಶ್ರೀರಾಮಾನುಜರು - ಜೀವನ ಮತ್ತು ಸಾಧನೆ

ಎಚ್. ವಿ. ಸರೋಜ

**ರಾ**ಮಾನುಜಾಚಾರ್ಯರ ಶಿಷ್ಯರಲ್ಲಿ ಧನುರ್ದಾಸನೂ ಒಬ್ಬ. ಅವನು ಶ್ರೀರಂಗದ ಹತ್ತಿರದಲ್ಲಿ ಇದ್ದ ಒಂದು ಹಳ್ಳಿಯಲ್ಲಿ ವಾಸಿಸುತ್ತಿದ್ದನು. ಅವನು ಒಳ್ಳೆಯ ಪೈಲ್ವಾನ್. ಹೆಸರುವಾಸಿಯಾಗಿದ್ದನು. ಇವನ ಹೆಂಡತಿಯ ಹೆಸರು ಕನಕಾಂಗಿ. ಆಕೆ ಗುಣಸಂಪನ್ನೆ, ರೂಪವತಿ. ಧನುರ್ದಾಸನಿಗೆ ತನ್ನ ಹೆಂಡತಿಯ ಮೇಲೆ ಅತೀವ ಪ್ರೇಮ. ಆಕೆಯೇ ಆತನಿಗೆ ಎಲ್ಲವೂ. ಅವನೇ ಅವಳನ್ನು ನೋಡಿಕೊಳ್ಳುತ್ತಿದ್ದ; ಅವಳ ಸೇವೆಯನ್ನು ಮಾಡುತ್ತಿದ್ದ. ಇದರಿಂದ ಹೆಂಡತಿಗೆ ಮುಜುಗರವಾಗುತ್ತಿತ್ತು.



ಒಂದು ದಿನ ಸಂಜೆ ರಂಗನಾಥಸ್ವಾಮಿಯ ಉತ್ಸವ ದಾರಿಯಲ್ಲಿ ಬಂದಿತು. ನಡೆದರೆ ಹೆಂಡತಿಗೆ ಆಯಾಸವಾಗುವುದೆಂದು, ಅವಳನ್ನು ಹೆಗಲ ಮೇಲೆ ಹೊತ್ತು ನಡೆದ ಧನುರ್ದಾಸ. ಜನರೆಲ್ಲಾ ಕಕ್ಕಾಬಿಕ್ಕಿಯಾಗಿ ಅವರಿಬ್ಬರನ್ನೇ ನೋಡುತ್ತಿದ್ದರು. ಅದೇ ವೇಳೆಗೆ ರಾಮಾನುಜರು ಅತ್ತಕಡೆಯೇ ಬಂದರು. ಈ ದೃಶ್ಯವನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಧನುರ್ದಾಸನಲ್ಲಿ ಏನೋ ಒಂದು ಬಗೆಯ ಮಮತೆ ಹುಟ್ಟಿತು. ಆತ ಯಾರೆಂದು ಶಿಷ್ಯರನ್ನು ವಿಚಾರಿಸಿದರು. ಶಿಷ್ಯರು ಅವನ ಬಗ್ಗೆ ತಿಳಿಸಿದರು. ಅವನ ಅವಗುಣಗಳ ಬಗ್ಗೆ ಬೇಕಾದಷ್ಟು ಟೀಕೆ ಮಾಡಿದರು. ಆದರೆ ರಾಮಾನುಜರಿಗೆ, ಆತನು ತನ್ನ ಹೆಂಡತಿಯ ಮೇಲೆ ಇಟ್ಟಿದ್ದ ನಿಷ್ಠೆಯ ಭಾವ ಬಹಳ ಇಷ್ಟವಾಯಿತು. ಅವರು ತಮ್ಮ ಶಿಷ್ಯರಿಗೆ ಹೀಗೆ ಹೇಳಿದರು: "ನೋಡಿ, ಅವನ ನಿಷ್ಠೆ ಎಷ್ಟು ಉತ್ತಮವಾದುದು. 'ನೀನಲ್ಲದೆ ನನಗೆ ಬೇರೆ ಯಾರೂ ಇಲ್ಲ' ಎಂಬ ಅವನ ಭಾವ ಶ್ರೇಷ್ಠವಾದುದಲ್ಲವೇನು? ನಿಜಕ್ಕೂ ಇದೊಂದು ಅಪರೂಪದ ಗುಣ. ಅದನ್ನು ಹೆಂಡತಿಯ ಕಡೆಯಿಂದ ಭಗವಂತನ ಕಡೆಗೆ ತಿರುಗಿಸಬೇಕು, ಅಷ್ಟೇ. ಅವನನ್ನು ನಾಳೆ ಬೆಳಗ್ಗೆ ನನ್ನ ಹತ್ತಿರ ಕರೆದುಕೊಂಡು ಬನ್ನಿ."

ಮಾರನೆಯ ದಿನ ಬೆಳಗ್ಗೆ ಧನುರ್ದಾಸನು ತನ್ನ ಮಡದಿಯೊಂದಿಗೆ ರಾಮಾನುಜರನ್ನು ನೋಡಲು ಬಂದನು. ರಾಮಾನುಜರು ಅವರಿಬ್ಬರಿಗೂ ತೀರ್ಥಪ್ರಸಾದಗಳನ್ನು ಕೊಟ್ಟರು. ಕನಕಾಂಗಿಯನ್ನು ಆಶ್ರಮ ನೋಡಲು ಶಿಷ್ಯರೊಂದಿಗೆ ಕಳಿಸಿಬಿಟ್ಟರು. ಕೊಠಡಿಯ ಬಾಗಿಲನ್ನು ಹಾಕಿಕೊಂಡರು. ಆಮೇಲೆ ಧನುರ್ದಾಸನಿಗೆ ಹೀಗೆ ಹೇಳಿದರು: "ಧನುರ್ದಾಸ, ನೀನು ಹೆಂಡತಿಯನ್ನು ಅತೀವ ಪ್ರೀತಿಸುತ್ತಿದ್ದೀಯೆ. ಆದರೆ ಪ್ರೀತಿಯು ಈ ರೀತಿ ಅತಿಯಾಗಬಾರದು. ಅದು ಬಹಳ ಅಪಾಯಕಾರಿಯಾದುದು. **'ಅತಿ ಸರ್ವತ್ರ ವರ್ಜಯೇತ್'** – 'ಅತಿಯಾದದ್ದನ್ನು ಯಾವಾಗಲೂ ಮಾಡಬಾರದು.' " ಇದಕ್ಕೆ ಧನುರ್ದಾಸನು ಮುಚ್ಚುಮರೆ ಮಾಡದೆ ಹೇಳಿದನು, "ಸ್ವಾಮಿ, ನನಗೇನೂ ತಿಳಿಯದು. ಆದರೆ ಆಕೆಯ ಸಾನ್ನಿಧ್ಯವೇ ನನಗೆ ಸ್ವರ್ಗ ಅನ್ನಿಸುತ್ತದೆ." ರಾಮಾನುಜರು ಧನುರ್ದಾಸನ ನಿರ್ಮಲ ಪ್ರೇಮ, ಮನಸ್ಸಾಕ್ಷಿಯ ಮಾತು, ಪ್ರಾಮಾಣಿಕ ಬುದ್ಧಿ – ಇವೆಲ್ಲವನ್ನೂ ಮೆಚ್ಚಿದರು. "ಇವೆಲ್ಲವೂ ಉತ್ತಮಭಕ್ತಿಯ ಲಕ್ಷಣಗಳು; ಆದರೆ ಅದನ್ನು ಭಗವಂತನೆಡೆಗೆ ತಿರುಗಿಸಬೇಕು" ಎಂದು ರಾಮಾನುಜರು ನಿಶ್ಚಯಿಸಿದರು. ನಂತರ ಹೇಳಿದರು, "ನೋಡು ಧನುರ್ದಾಸ, ನಾನು ಇದಕ್ಕಿಂತಲೂ ಅದ್ಭುತವಾದ ಪ್ರೇಮವನ್ನು ತೋರಿಸಬಲ್ಲೆ." ಧನುರ್ದಾಸ ನುಡಿದ, "ಸ್ವಾಮಿ, ಇದಕ್ಕಿಂತಲೂ ಅದ್ಭುತವಾದ ಪ್ರೇಮ ಇರಲು ಸಾಧ್ಯವಿಲ್ಲ. ಆದರೆ ನಿಮ್ಮ ಮೇಲಿನ ಗೌರವದಿಂದ ನಾನು ಒಪ್ಪಿದ್ದೇನೆ. ಅದೇನು ತೋರಿಸುತ್ತೀರೋ, ಬೇಗನೆ ತೋರಿಸಿ."

ಧನುರ್ದಾಸನು ಮಾರನೆಯ ದಿನ ಬೆಳಗ್ಗೆ ಸ್ನಾನಮಾಡಿ ಬಂದನು. ದೇವಸ್ಥಾನದಲ್ಲಿ ಶ್ರೀರಂಗನಾಥನಿಗೆ ಬಹಳ ಸುಂದರವಾಗಿ ಅಲಂಕಾರ ಮಾಡಲಾಗಿತ್ತು. ಬಣ್ಣಬಣ್ಣದ ತೋಮಾಲೆ ಧೂಪದೀಪಗಳಿಂದ ಸ್ವಾಮಿಯ ವಿಗ್ರಹ ಜ್ವಾಜ್ವಲ್ಯಮಾನವಾಗಿ ವಿಜೃಂಭಿಸುತ್ತಿತ್ತು. ರಾಮಾನುಜರು ಸ್ವಾಮಿಗೆ ಹೀಗೆ ಪ್ರಾರ್ಥಿಸಿದರು: "ಹೇ ಪ್ರಭು, ಧನುರ್ದಾಸನ ಕಣ್ಣುತೆರೆಸು. ಅವನ ಅಜ್ಞಾನವನ್ನು ದೂರಮಾಡು. ನಿನ್ನ ಸೇವೆಗಾಗಿ ನನಗೊಬ್ಬ ನಿಷ್ಠಾವಂತ ಸೇವಕನು ಬೇಕಾಗಿದ್ದಾನೆ. ಅದಕ್ಕೆ ಬೇಕಾದ ಗುಣಗಳೆಲ್ಲವೂ ಇವನಲ್ಲಿವೆ. ದಯವಿಟ್ಟು ಇವನನ್ನು ಅನುಗ್ರಹಿಸು."

ಆಚಾರ್ಯರು ಶ್ರೀರಂಗನಾಥಸ್ವಾಮಿಯ ಮುಂದುಗಡೆ ನಿಂತುಕೊಂಡಿದ್ದಾರೆ. ಪಕ್ಕದಲ್ಲಿಯೇ ಧನುರ್ದಾಸ ನಿಂತಿದ್ದಾನೆ. ಗರ್ಭಗುಡಿಗೆ ಹಾಕಿದ್ದ ತೆರೆಯು ಸರಿಯಿತು. ಗಂಟೆ, ಜಾಗಟೆ, ಕೊಂಬು, ಕಹಳೆ ಮತ್ತು ಶಂಖಗಳ ನಿನಾದ ಮೊಳಗಿತು. ಆ ದಿವ್ಯಸಾನ್ನಿಧ್ಯದಲ್ಲಿ ಸ್ತೋತ್ರಗಳ ಉಚ್ಚಾರದ ನಡುವೆ ಪೂಜಾರಿಗಳು ರಂಗನಾಥಸ್ವಾಮಿಗೆ ಆರತಿಯನ್ನು ಮಾಡಿದರು.

ಇದನ್ನು ಧನುರ್ದಾಸ ತದೇಕಚಿತ್ತದಿಂದ ನೋಡುತ್ತಿದ್ದನು. ಮೈಮರೆತನು. ಅವನ ಕಣ್ಣುಗಳಲ್ಲಿ ಆನಂದಬಾಷ್ಪ ಹರಿಯಿತು. ರಂಗನಾಥನಲ್ಲಿ ನೆಟ್ಟಿದ್ದ ಕಣ್ಣು, ಇಟ್ಟಿದ್ದ ದೃಷ್ಟಿ, ಮುಗಿದಿದ್ದ ಕೈಗಳು ಅಲುಗಾಡುತ್ತಲೇ ಇರಲಿಲ್ಲ. ಇದನ್ನು ಕಂಡ ರಾಮಾನುಜಾಚಾರ್ಯರು ತಮ್ಮ ಸುಮಧುರವಾದ ಕಂಠದಿಂದ ತಿರುಪ್ಪಾಣಿ ಆಳ್ವಾರ್ ಅವರು ರಚಿಸಿದ ಪಾಶುರಗಳನ್ನು (ಹಾಡುಗಳು) ಹಾಡಿದರು. ಧನುರ್ದಾಸ ಸಂಪೂರ್ಣವಾಗಿ